**O.S.No./41/2017, PW-3**
**Date :05-12-2022**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀಸವಾಲು ಃ 01 ನೇ ಪ್ರತಿವಾದಿ ಪರ ವಕೀಲರಿಂದ**

ಈ ಪ್ರಕರಣದಲ್ಲಿ ಯಾರು ಯಾರ ವಿರುದ್ದ ದಾವೆಯನ್ನು ದಾಖಲಿಸಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 132: 133: 134 ಆಸ್ತಿಗೆ ಸಂಬಂಧಿಸಿದಂತೆ ನಾನು ಸಾಕ್ಷಿಯನ್ನು ಹೇಳಲು ಬಂದಿರುತ್ತೇನೆ. ಸದರಿ 132: 133: 134 ಸರ್ವೆ ನಂಬರಿನಲ್ಲಿ ಒಟ್ಟು 805 ಎಕರೆ 26 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನು ಬಂಡಿಹರ್ಲಾಪುರ ಗ್ರಾಮದ ಸೀಮಾದಲ್ಲಿ ಬರುತ್ತವೆ. ನಾನು ಬಂಡಿಹರ್ಲಾಪುರ ಗ್ರಾಮದಲ್ಲಿ ಒಕ್ಕಲುತನ ಮಾಡುತ್ತೇನೆ. ಸದರಿ 132: 133: 134 ಸರ್ವೆ ನಂಬರಿನಲ್ಲಿ ನನ್ನ ಜಮೀನು ಸಹ ಇರುತ್ತದೆ. ನನ್ನ ಜಮೀನನ ವಿಸ್ತೀರ್ಣ 2 ಎಕರೆ ಇರುತ್ತದೆ. ನನ್ನ ಜಮೀನಿನಿಂದ 1 ನೇ ಪ್ರತಿವಾದಿಯ ಜಮೀನಿಗೆ 2 ರಿಂದ 3 ಕಿ.ಮೀ ಅಂತರ ಇರುತ್ತದೆ. ನನಗೆ 1 ನೇ ಪ್ರತಿವಾದಿಯ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ವಾದಿ ಮತ್ತು ಪ್ರತಿವಾದಿಯ ನಡುವೆ 2017 ರಿಂದ ಜಮೀನು ವಿವಾದ ಇರುತ್ತದೆ. ಈ ಪ್ರಕರಣಕ್ಕಿಂತ ಮೊದಲು ವಾದಿಯು ಹಾಗೂ ಪ್ರತಿವಾದಿಯ ನಡುವೆ ಬೇರೆ ಯಾವುದಾದರೂ ಪ್ರಕರಣಗಳು ಇದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿಯ ಎಷ್ಟು ಪ್ರಕರಣಗಳು ಚಾಲ್ತಿ ಇರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ವಾದಿ ಜಮೀನು 4 ಎಕರೆ ಇರುತ್ತದೆ. ವಾದಿಯ ಜಮೀನಿನ ಚೆಕ್ಕುಬಂದಿ ನನಗೆ ಹೇಳಲು ಬರುತ್ತದೆ. ಪೂರ್ವಕ್ಕೆ ಹಳ್ಳ ಇರುತ್ತದೆ. ಪಶ್ಚಿಮಕ್ಕೆ ಭಾಸ್ಕರರವರ ಜಮೀನು, ಉತ್ತರಕ್ಕೆ ನಾಗವೇಣಿ ಗಂಡ ಶ್ರೀರಾಮುಲುರವರ ಜಮೀನು ಇರುತ್ತದೆ, ದಕ್ಷಿಣಕ್ಕೆ ಸ್ಮಾಶಾಣ ಮತ್ತು ಕಾಲುವೆ ಇರುತ್ತದೆ. ವಾದಿಯ ಜಮೀನಿನ ಚೆಕ್ಕುಬಂದಿಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ನನ್ನ ಹಾಗೂ ವಾದಿಯ ಜಮೀನಿಗೆ ಸುಮಾರು 300 ಮೀಟರ್ ಅಂತರ ಇರುತ್ತದೆ. ನನ್ನ ಹೊಲದ ಹಾಗೂ ವಾದಿಯ ಹೊಲದ ನಡುವೆ ಪ್ರಕಾಶರವರ ಹೊಲ ಇರುತ್ತದೆ. ನನ್ನ ಹಾಗೂ ವಾದಿಯ ಹೊಲದ ನಡುವೆ ಪ್ರಕಾಶರವರ ಒಬ್ಬರದೆ ಹೊಲ ಇರುತ್ತದೆ. ನನ್ನ ಹೊಲದ ಪಶ್ಚಿಮಕ್ಕೆ ವಾದಿಯ ಹೊಲ ಬರುತ್ತದೆ.

2014 ರಲ್ಲಿ ಪ್ರತಿವಾದಿಯು ವಾದಿಯ ವಿರುದ್ದ ಇದೇ ನ್ಯಾಯಾಲಯದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಿಂತೆ ದಾವೆಯನ್ನು ಹೂಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಸ್ವತ್ತು ವಾದಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ದಾವಾ ಸ್ವತ್ತು ವಾದಿಗೆ 1992 ರಲ್ಲಿ ಮಂಜೂರಾಗಿರುತ್ತದೆ. ಸದರಿ ಮಂಜೂರಾತಿ ಆದೇಶ ಪತ್ರವನ್ನು ನಾನು ನೋಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು).

(ಇಂದು ದಿನಾಂಕ **05-12-2022** ರಂದು ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಕೊಪ್ಪಳ.